ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ರಸ್ತೆಯ ವರ್ಗೀಕರಣ	ರಸ್ತೆಯ ಉದ್ದ (ಕಿ. ಮೀ.)
(೧) ರಾಷ್ಟ್ರೀಯ ಹೆದ್ದಾರಿಗಳು	೧,೯೬೮
(೨) ರಾಜ್ಯ ಹೆದ್ದಾರಿಗಳು	೭,೯೧೨
(೩) ಜಿಲ್ಲಾ ಮುಖ್ಯ ರಸ್ತೆಗಳು	೧೫,೯೭೨
(೪) ಇತರ ಜಿಲ್ಲಾ ರಸ್ತೆಗಳು	೭,೦೯೫
(೫) ಹಳ್ಳಿ ರಸ್ತೆಗಳು	೪೫,೯೨೫

ಆ) ಸರ್ಕಾರದ ಆಜ್ಞೆ ನಂ. ಎಫ್. ಎಫ್. ಡಿ. ೫೬ ಎಫ್‌ಎಸಿ ೮೧ ; ದಿನಾಂಕ ೨೮ನೇ ಆಗಸ್ಟ್ ೧೯೮೨ರ ಪ್ರಕಾರ ಬಿದರೆ, ದಕ್ಷಿಣ ಕನ್ನಡ, ಕೊಡಗು, ಹಾಸನ, ಗುಲ್ಬರ್ಗ, ಶಿವಮೊಗ್ಗ, ಧಾರವಾಡ, ಬೆಳಗಾವಿ, ಮೈಸೂರು, ಮಂಡ್ಯ, ಬೆಂಗಳೂರು ; ಈ ಹನ್ನೊಂದು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿರುವ ಮರಗಳು : ಅರಣ್ಯ ಇಲಾಖೆಯವರ ಉಸ್ತುವಾರಿಕೆಗೆ ಒಳಪಟ್ಟಿರುತ್ತದೆ.

ಉಳಿದ ಎಂಟು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಯ ಮರಗಳ ಉಸ್ತುವಾರಿಯು ಲೋಕೋಪಯೋಗಿ ಇಲಾಖೆಗೆ ಒಳಪಟ್ಟಿರುತ್ತದೆ. ಇದಲ್ಲದೆ ರಾಜ್ಯದಲ್ಲಿರುವ ಎಲ್ಲಾ ಜಿಲ್ಲಾ ರಸ್ತೆಗಳ, ಇತರ ಜಿಲ್ಲಾ ರಸ್ತೆಗಳ ಮತ್ತು ಹಳ್ಳಿ ರಸ್ತೆಗಳ ಮರಗಳ ಉಸ್ತುವಾರಿಯು ಲೋಕೋಪಯೋಗಿ ಇಲಾಖೆಗೆ ಒಳಪಟ್ಟಿರುತ್ತದೆ.

ಇ) ಇಲಾಖೆಯ ಉಸ್ತುವಾರಿಕೆಗೆ ಒಳಪಡುವ ರಸ್ತೆ ಬದಿಯ ಮರಗಳನ್ನು ನೋಡಿಕೊಳ್ಳಲಾಗುತ್ತಿದೆ.

ಈ) ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ

೧೫೦ (ಚಿಟಿಳಿ) ಶ್ರೀ ಶಿವಸಂಗಪ್ಪ ಸಿದ್ದಪ್ಪ ಕಡಪಟ್ಟಿ (ಹುನಗುಂದ).—ಮಾನ್ಯ ಲೋಕೋಪಯೋಗಿ ಉಚ್ಚುಕಟ್ಟು ಪುದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕೃಷ್ಣ ಮೇಲ್ದಂಡೆಯ ಯೋಜನೆಯ ನಾರಾಯಣಪುರ ಹಾಗೂ ಆಲಮಟ್ಟಿ ಜಲಾಶಯಗಳಲ್ಲಿ ಮುಳುಗಡೆಯಾಗುವ ಭೂಮಿ ಹಾಗೂ ಊರುಗಳು ಎಷ್ಟು ? (ತಾಲ್ಲೂಕುವಾರು ಅಂಕಿಗಳು)

ಆ) ವಿಜಾಪುರ ಜಿಲ್ಲೆಯಲ್ಲಿ ಇಷ್ಟು ಭೂಮಿ ಹಾಗೂ ಊರುಗಳು ಮುಳುಗಡೆಯಾಗುತ್ತಿದ್ದರೂ ಯೋಜನೆಯ ಪ್ರಕಾರ ಮೊದಲನೆಯ ಹರಿತದಲ್ಲಿ ನೀರಾವರಿಯಾಗುವ ಕ್ಷೇತ್ರ ಎಷ್ಟು ?

ಇ) ಅನೇಕ ಶತಮಾನಗಳಿಂದ ಬರಗಾಲಕ್ಕೆ ತುತ್ತಾಗುವ ಈ ಜಿಲ್ಲೆಗೆ ಮೊದಲನೆಯ ಹಂತದಲ್ಲಿಯೇ ಪ್ರಾಶಸ್ತ್ಯತೆ ಕೊಟ್ಟು ಹೆಚ್ಚಿನ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸುವ ವಿಚಾರ ಸರ್ಕಾರಕ್ಕೆ ಇದೆಯೇ ?

ಈ) ಹಾಗಿದ್ದಲ್ಲಿ ನಿರ್ದಿಷ್ಟಪಡಿಸಿದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಕ್ಷೇತ್ರಕ್ಕೆ ಯಾವ ಯಾವ ಇಸವಿಯಲ್ಲಿ ನೀರು ಕೊಡಲಾಗುವುದು ಹಾಗೂ ಈ ಬಗ್ಗೆ ಆಯವ್ಯಯ ಪಟ್ಟಿಯಲ್ಲಿ ೧೯೮೬-೮೭ರಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗಿದೆ ಹಾಗೂ ಮುಂದಿನ ೪ ವರ್ಷಗಳಲ್ಲಿ ಪ್ರತಿ ವರ್ಷ ಎಷ್ಟು ಹಣ ಒದಗಿಸಿ ಖರ್ಚುಮಾಡಿ ನಿರ್ದಿಷ್ಟಪಡಿಸಿದ ಎಷ್ಟು ಎಕರೆ ಜಮೀನಿನಲ್ಲಿ ನೀರಾವರಿ ಮಾಡಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಮಂಜೂರಾಗಿರುವ ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಪರಿಷ್ಕೃತ ಅಂದಾಜಿನ ಪ್ರಕಾರ ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಲ್ಲಿ ಮುಳುಗಡೆಯಾಗುವ ಭೂಮಿ ಮತ್ತು ಊರುಗಳ ವಿವರಗಳು ಕೆಳಗಿನಂತಿವೆ:

		ಆಲಮಟ್ಟಿ ಜಲಾಶಯ		ನಾರಾಯಣಪುರ ಜಲಾಶಯ	
	ತಾಲ್ಲೂಕು	ಭೂಮಿಯ ವಿಸ್ತೀರ್ಣ (ಎಕರೆಗಳಲ್ಲಿ)	ಊರುಗಳ ಸಂಖ್ಯೆ	ಭೂಮಿಯ ವಿಸ್ತೀರ್ಣ (ಎಕರೆಗಳಲ್ಲಿ)	ಊರುಗಳ ಸಂಖ್ಯೆ
೧.	ಶೋರಾಪುರ	—	—	೪೨೫	೧
೨.	ಹುನಗುಂದ	—	—	೧೦,೫೯೪	೧೩
೩.	ಮುದ್ದೇಬಿಹಾಳ	—	—	೧೬,೯೭೭	೧೬
೪.	ಲಿಂಗಸುಗೂರು	—	—	೯,೩೯೦	೧೧
೫.	ಬಾಗಲಕೋಟೆ	೧೪,೭೪೫	೩೨	೧,೪೭೧	—
೬.	ಬೀಳಗಿ	೨೧,೬೬೦	೪೭	—	—
೭.	ಜಮಖಂಡಿ	೪೦	೩	—	—
೮.	ಬಿಜಾಪುರ	೨,೭೨೨	೪	—	—
೯.	ಅಥಣಿ	—	೧	—	—
೧೦.	ಬಸವನಬಾಗೇವಾಡಿ	೧೩,೪೪೦	೧೪	—	—
	ಒಟ್ಟು	೫೨,೬೦೭	೧೦೧	೩೮,೬೫೭	೪೧

ಆ) ಮೊದಲ ಘಟ್ಟದ ಯೋಜನೆಯ ಪ್ರಕಾರ ನೀರಾವರಿಯಾಗುವ ಕ್ಷೇತ್ರದ ವಿವರ ಹೀಗಿದೆ :

	ಜಿಲ್ಲೆ	ಆಲಮಟ್ಟಿ ಎಡದಂಡೆ ಕಾಲೆಯಿಂದ	ನಾರಾಯಣಪುರ ಎಡದಂಡೆ ಕಾಲೆಯಿಂದ	ಒಟ್ಟು
೧.	ಬಿಜಾಪುರ	೪೦,೦೦೦ ಎಕರೆ	೨,೯೭,೦೦೦ ಎಕರೆ	೩,೩೭,೦೦೦ ಎಕರೆ
೨.	ಗುಲ್ಬರ್ಗ	—	೭,೧೩,೦೦೦ ಎಕರೆ	೭,೧೩,೦೦೦ ಎಕರೆ
	ಒಟ್ಟು	೪೦,೦೦೦ ಎಕರೆ	೧೦,೧೦,೦೦೦ ಎಕರೆ	೧೦,೫೦,೦೦೦ ಎಕರೆ

ಇ) ಮೇಲೆ ತಿಳಿಸಿರುವಂತೆ, ಮಂಜೂರಾದ ಮೊದಲ ಘಟ್ಟದ ಯೋಜನೆಯ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ ೩,೩೭,೦೦೦ ಎಕರೆಯಷ್ಟು ಜಮೀನಿಗೆ ನೀರಾವರಿ ಸೌಲಭ್ಯ ಒದಗುತ್ತದೆ. ಮೊದಲ ಘಟ್ಟದ ಯೋಜನೆಯನ್ನು ೧೯೯೫-೯೬ರ ವೇಳೆಗೆ ಪೂರೈಸುವ ಕಾರ್ಯಕ್ರಮವಿದ್ದು, ಅಷ್ಟರೊಳಗೆ ಬಿಜಾಪುರ ಜಿಲ್ಲೆಯ ಮೇಲೆ ಹೇಳಿದ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಲಿದೆ.

ಈ) ಯಾವ ಯಾವ ರೀತಿಯಿಂದ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಕ್ಷೇತ್ರಕ್ಕೆ ಯಾವ ಯಾವ ಇಸವಿಯಲ್ಲಿ, ನೀರು ಕೊಡಲಾಗುವುದು ಎಂದು ನಿರ್ದಿಷ್ಟವಾಗಿ ಈಗಲೇ ಹೇಳಲು ಬರುವುದಿಲ್ಲ. ಪೂರ್ಣ ೧೯೮೬ರ ಅಂತ್ಯದವರೆಗೆ ೭೯,೬೨೯ ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ ಮತ್ತು ೧೯೮೬-೮೭ನೇ ಸಾಲಿನಲ್ಲಿ ೩೦,೦೦೦ ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು

ಉದ್ದೇಶಿಸಲಾಗಿದೆ. ೧೯೫೫-೬೬ರ ವೇಳೆಗೆ ಯೋಜನೆಯು ಪೂರ್ಣ ೪.೨೫ ಲಕ್ಷ ಹೆಕ್ಟೇರು (೧೦,೫೦,೦೦೦ ಎಕರೆ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ೧೯೮೬-೮೭ನೇ ಸಾಲಿಗಾಗಿ ಈ ಯೋಜನೆಗೆ ೬೩.೮೨ ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ೭ನೇ ಪಂಚ ವಾರ್ಷಿಕ ಯೋಜನೆಯಲ್ಲಿ (೧೯೮೫-೮೬ ರಿಂದ ೧೯೮೯-೯೦ ರವರೆಗೆ) ಈ ಯೋಜನೆಗೆ ೪೦೦ ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

ನಂಜನಗೂಡು ಗುಂಡ್ಲ ಹಳ್ಳದ ಸೇತುವೆ ಬಗ್ಗೆ

೧೩೧೦ (೩೮೬) ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ನಂಜನಗೂಡು ಪುರಸಭೆಯ ಸರಹದ್ದಿನಲ್ಲಿ ಬರುವ ಗುಂಡ್ಲಹಳ್ಳದ ಸೇತುವೆ ಶಿಥಿಲವಾಗಿ ವಾಹನ ಸಂಚಾರಗಳಿಗೆ ಅನರ್ಹವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಸೇತುವೆ ಬದಲಾಗಿ ಹೊಸ ಸೇತುವೆ ನಿರ್ಮಾಣಕ್ಕೆ ಸರಕಾರದವರು ಮಂಜೂರಾತಿ ನೀಡಿದ್ದಾರೆಯೇ ?

ಇ) ಇದರ ಅಂದಾಜು ವೆಚ್ಚವೆಷ್ಟು ?

ಈ) ಈ ಕೆಲಸ ಯಾವಾಗ ಪೂರ್ಣಗೊಳ್ಳುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಈ ಸೇತುವೆ ವಾಹನ ಸಂಚಾರಕ್ಕೆ ಯೋಗ್ಯವಾಗಿದೆ.

ಆ)
ಇ)
ಈ) } 'ಅ' ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಕಬಿನಿ ನೀರಾವರಿ ಯೋಜನೆ ಬಗ್ಗೆ

೧೩೨೨ (೩೮೭) ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕಬಿನಿ ನೀರಾವರಿ ಹೆಚ್ಚಿನ ಯೋಜನೆಗೆ ಸರ್ಕಾರದವರು ಮಂಜೂರಾತಿ ನೀಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು ?

ಇ) ಈ ಯೋಜನೆಯಲ್ಲಿ ನುಗು ಜಲಾಶಯಕ್ಕೆ ಕಬಿನಿ ನದಿಯಿಂದ ನೀರೊದಗಿಸುವುದನ್ನು ಸೇರಿಸಲಾಗಿದೆಯೆ ?

ಈ) ಈ ಕೆಲಸ ಎಷ್ಟು ವರ್ಷಗಳಲ್ಲಿ ಪೂರ್ಣಗೊಳ್ಳುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಪ್ರಸ್ತುತ ನೀರಾವರಿ ಸೇರಿರುವ ಕಬಿನಿ ಯೋಜನೆಗೆ ಮಂಜೂರಾತಿ ನೀಡಿದೆ.

ಆ) ಈ ಕಬಿನಿ ಯೋಜನೆಯ ಅಂದಾಜು ವೆಚ್ಚ ೫೯ ಕೋಟಿ ರೂ.ಗಳು.

ಇ) ಸೇರಿಸಲಾಗಿದೆ.

ಈ) ಎಂಭತ್ತನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮುಗಿಸಲು ಯೋಚಿಸಲಾಗಿದೆ.